ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಖಾನಾಪೂರ.

ಸಿ.ಸಿ ನಂ**: 1006/2021**

ಪಿ.ಡಬ್ಲ್ಯೂ- **1**
ಸಿ.ಡಬ್ಲ್ಯೂ- **1**

ಹೆಸರು : ಅಪ್ಪಾಜಿ ಬುದ್ದಪ್ಪಾ ಪಾಟೀಲ

ವಯಸ್ಸು : **43** ವರ್ಷ

ಉದ್ಯೋಗ : ಗೌಂಡಿ ಕೆಲಸ

ವಾಸ : ರಾಮನಗರ

ದಿನಾಂಕ 09-07-2024 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ಆರೋಪಿತರು ನನಗೆ ಪರಿಚಯ. ಚಾಸಾ-4 ನನ್ನ ಹೆಂಡತಿಯ ಅಕ್ಕ. ಚಾಸಾ-7 ನನ್ನ ಮಗ. ಚಾಸಾ-8 ಆರೋಪಿತನ ಮಗಳು. ಚಾಸಾ-9 ನನ್ನ ಹೆಂಡತಿ. ಚಾಸಾ-5 ಮತ್ತು 6 ನನಗೆ ಪರಿಚಯ.

ದಿನಾಂಕ 04.02.2021 ರಂದು ರಾತ್ರಿ 10.30 ಗಂಟೆಗೆ ಚಾಸಾ-4 ರವರನ್ನು ಬಿಡಲು ದುದವಾಳಕ್ಕೆ ನಾನು ಹೋದಾಗ , ನಾನು ಅವರನ್ನು ಬಿಟ್ಟು ಗಾಡಿಯನ್ನು ಹೊಳ್ಳಿಸುತ್ತಿರುವಾಗ 1 ನೇ ಆರೋಪಿಯು ನಮ್ಮ ಊರಿಗೆ ನೀನು ಏಕೆ ಬಂದಿರುತ್ತೀಯಾ ನೀನ್ನ ಕೆಲಸ ಏನು ಎಂದು ಕಟ್ಟಿಗೆಯಿಂದ ನನ್ನ ಕುಂಡಿಗೆ ಹೊಡೆದನು. 2 ನೇ ಆರೋಪಿ ಒಂದು ಕಬ್ಬಿಣದ ಸಳಿ ತೆಗೆದುಕೊಂಡು ಬಂದವನೇ ನನ್ನ ಬಲಗಡೆ ಕುಂಡಿಗೆ ಹೊಡೆದನು. 3 ನೇ ಆರೋಪಿಯು 2 ನೇ ಆರೋಪಿಯ ಕಡೆ ಇದ್ದ ಕಬ್ಬಿಣದ ಸಳಿಯಿಂದ ಮತ್ತೆ ನನ್ನ ಕುಂಡಿಗೆ ಹೊಡೆದನು. 2 ನೇ ಆರೋಪಿಯು ತನ್ನ ಕಾಲಿನಲ್ಲಿದ್ದ ಚಪ್ಪಲಿಯಿಂದ ಎರಡುಗಲ್ಲುಗಳಿಗೆ ಹೊಡೆದನು. ನಂತರ ಸದರಿ ಚಪ್ಪಲನ್ನು ನನ್ನ ಬಾಯಿಗೆ ಹಾಕಿ ತುರುಕಿದನು. ನನ್ನ ಎರಡು ಕಿವಿಯನ್ನು ಹಿಡಿದು ಜಗ್ಗಿದನು. 4 ನೇ ಆರೋಪಿಯು

ಹಿಂದಿನಿಂದ ಬಂದವಳೇ ಒಂದು ಕಟ್ಟಿಗೆಯಿಂದ ನನ್ನ ತಲೆಯ ಮೇಲೆ ಹೊಡೆದಳು. ಸಂಭಾಜಿ ಮಲ್ಲಪ್ಪಾಡ ಹಣಬರ ಎಂಬ ವ್ಯಕ್ತಿ ಬಂದು ನಿನ್ನ ಮಗ ರಾಜಶ್ರೀಯನ್ನು ಓಡಿಸಿಕೊಂಡು ಹೋಗಿದ್ದಾನೆ, ನೀವು ಏಕೆ ಮದುವೆ ಮಾಡಿಸಿದ್ದೀರಿ ಎಂದು ನನ್ನ ಬೆನ್ನಿಗೆ ಝಾಡಿಸಿ ಒದ್ದನು. 1 ನೇ ಆರೋಪಿಯ ಶಂಕರನ ಮಗಳು ಬಂದು ಬಡಿಗೆಯಿಂದ ನನ್ನ ತಲೆಗೆ ಹೊಡೆದಳು. ಆಗ ನಾನು ಕೆಳಗೆ ಬಿದ್ದೆನು. ಎಲ್ಲರೂ ನನಗೆ ಹೇಗೆ ಬೇಕು ಹಾಗೆ ಹೊಡೆಯ ತೊಡಗಿದರು. 2 ನೇ ಆರೊಪಿಯು ನನಗೆ ಕುಡಗೋಲ, ಕೊಡಲಿ ನ್ನು ತೋರಿಸಿ ನಿನನ್ನು ಕಡೆದು ಬಿಡುತ್ತೇನೆಂದು ಹೇಳಿದನು. 1 ನೇ ಆರೋಪಿಯು ನನಗೆ ಚಾಕು ತೋರಿಸಿ ಜೀವ ಧಮಕಿ ಹಾಕಿದನು. ಸದರಿ ಚಾಕುವನ್ನು ನನಗೆ ಹಾಕಲು ಬಂದಾಗ ಚಾಸಾ5 ಮತ್ತು 6 ರವರು ಬಂದು ತಡೆದರು. ನಂತರ ಅಲ್ಲಿ ಪೊಲೀಸರು ಬಂದು ನನ್ನನ್ನು ಹಾಗೂ ಆರೋಪಿತರನ್ನು ಲೋಂಡಾ ಪೊಲೀಸ ಠಾಣೆಗೆ ಕರೆದುಕೊಂಡು ಹೋದರು. ನಂತರ ಅಲ್ಲಿಗೆ ಗೋಪಾಲ ಹಣಬರ ಎಂಬ ವ್ಯಕ್ತಿ ಬಂದನು. ನಂತರ ನಾನು ಗೋಪಾಲ ಹಣಬರ ಇಬ್ಬರು ಸೇರಿಕೊಂಡು ನನ್ನ ಮೋಟರ ಸೈಕಲನ್ನು ತರಲು ದುದವಾಳಕ್ಕೆ ಹೋಗುತ್ತಿದ್ದಾಗ ಅರ್ಧ ದಾರಿಯಲ್ಲಿಯೇ ಗೋಪಾಲ ಈತನು ಗಾಡಿಯನ್ನು ನಿಲ್ಲಿಸಿ ನನ್ನ ಕಪಾಳಕ್ಕೆ ಹೊಡೆದನು. ಇಷ್ಟೇಲ್ಲಾ ನಿನ್ನನ್ನು ಹೊಡೆಸಿದ್ದು ನಾನೇ ಈಗ ನಾನು ನಿನ್ನನ್ನು ಏನಾದರು ಮಾಡುತ್ತೇನೆ ಏನು ಮಾಡುತ್ತೀಯಾ ಎಂದು ಕೇಳಿದನು. ನಂತರ ನನ್ನನ್ನು ದುದವಾಳಕ್ಕೆ ಬಿಟ್ಟನು ನಾನು ನನ್ನ ಗಾಡಿಯನ್ನು ತೆಗೆದುಕೊಂಡು ನಮ್ಮ ಊರಿಗೆ ಹೋದೆನು. ನಂತರ ದಿನಾಂಕ 05.02.2021 ರಂದು ನಾನು ಬೆಳಗಾವಿಯ ಬಿಮ್ಸ ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ದಾಖಲಾದೆನು. ನಂತರ ಅದೇ ದಿನ ರಾತ್ರಿ 09.00 ಗಂಟೆಗೆ ಮನೆಗೆ ಬಂದೆನು. ನಂತರ ಮರುದಿವಸ ದಿನಾಂಕ 06.02.2021 ರಂದು ಖಾನಾಪೂರಕ್ಕೆ ಬಂದು ಪಿರ್ಯಾದಿಯನ್ನು ನೀಡಿರುತ್ತೇನೆ. ಸದರಿ ಪಿರ್ಯಾದಿಯನ್ನು ನಿಪಿ-1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿನಾಂಕ 07.02.2021 ರಂದು ಪೊಲೀಸರು ಘಟನಾ ಸ್ಥಳದ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಘಟನಾ ಜಾಗೆಯಲ್ಲಿ ಸಿಕ್ಕ ಒಂದು ಕಟ್ಟಿಗೆಯನ್ನು ಜಪ್ತು ಮಾಡಲಾಯಿತು. ಸಾಕ್ಷಿದಾರ ನ್ಯಾಯಾಲಯದ ಮುಂದೆ ಇರುವ

ಕಟ್ಟಿಗೆಯನ್ನು ಗುರುತಿಸಿ ಇದೇ ಕಟ್ಟಿಗೆಯಿಂದ ನನ್ನನ್ನು ಹೊಡೆದಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಕಟ್ಟಿಗೆಯನ್ನು ಮು ಮಾ 1 ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋಗಳೆಂದು ಸಾಕ್ಷಿಯು ಎರಡು ಫೋಟೋಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ3 ಮತ್ತು 4 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಆರೋಪಿತರ ಪರ ವಕೀಲರು ಸಮಯ ಕೋರಿದ್ದು ಪಾಟೀ ಸವಾಲು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.